**ಪತ್ರಿಕಾ ಪ್ರಕಟಣೆ**

ವಿಜಯಪುರ
ದಿನಾಂಕ: 31.07.2021.

## 1] ಇಂಡಿ ಗ್ರಾಮೀಣ ಪೊಲೀಸ ಠಾಣೆ ಗುನ್ನೆ ನಂ: 133/2021 ಕಲಂ: 302 ಐಪಿಸಿ.

ದಿನಾಂಕ; 30.07.2021 ರಂದು ಬೆಳಗಿನ 00:45 ಗಂಟೆ ಸುಮಾರಿಗೆ ಇದರಲ್ಲಿಯ ಯಾರೋ ಆರೋಪಿತರು ದಿನದಂತೆ ಅಹಿರಸಂಗದಲ್ಲಿರುವ ತನ್ನ ಮಗನ ಮನೆಯ ಮುಂದೆ ಮಲಗಿಕೊಂಡಿದ್ದ ಅಮೋಘಿ. ತಂ ಶರಣಪ್ಪ ಮೂಲಿಮನಿ. ವಯಾ 65 ವರ್ಷ ಸಾ॥ ತೆನ್ನಳಿ ಈತನಿಗೆ ಯಾರೋ ಆರೋಪಿತರೋ, ಯಾವುದೋ ಕಾರಣಕ್ಕಾಗಿ ಕೊಲೆ ಮಾಡುವ ಉದ್ದೇಶದಿಂದ ಅವನ ತಲೆಯ ಮೇಲೆ ಕಲ್ಲು ಎತ್ತಿ ಹಾಕಿ ತಲೆಗೆ ಭಾರಿ ಗಾಯಪಡಿಸಿ ಕೊಲೆ ಮಾಡಿದ್ದು ಇರುತ್ತದೆ.. ಈ ಬಗ್ಗೆ ಮಲ್ಲವ್ವ. ಗಂ. ಅಮೋಘಿ. ಮೂಲಿಮನಿ. ವಯಾ 60 ವರ್ಷ ಜಾತಿ: ಹಿಂದೂ ಕುರುಬರ ಉದ್ಯೋಗ ಮನೆಕೆಲಸ. ಸಾ॥ ತೆನ್ನಳ್ಳಿ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 30.07.2021 ರಂದು ಇಂಡಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

## 2] ದೇವರಹಿಪ್ಪರಗಿ ಪೊಲೀಸ ಠಾಣೆ ಗುನ್ನಾ. ನಂ: 127/2021 ಕಲಂ: 78(3) ಕೆ ಪಿ ಆ್ಯಕ್ಟ್.

ದಿನಾಂಕ: 29/07/2021 ರಂದು 13:00 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತರಾದ ಭೀಮಪ್ಪ ತಂದೆ ಬನ್ನೆಪ್ಪ ಮಳ್ಳಿ, ವಯಾ: 35 ವರ್ಷ, ಜಾತಿ: ಹಿಂದೂ ಕುರುಬರ, ಸಾ: ಹಂದಿಗನೂರ, ತಾ: ಸಿಂದಗಿ ಈತನು ಹಂದಿಗನೂರ ಗ್ರಾಮದ ಶ್ರೀ ಹಣಮಂತ ದೇವರ ಗುಡಿಯ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ತನ್ನ ಫಾಯಿದೆಗೋಸ್ಕರ ಹೋಗಿ ಬರುವ ಜನರಿಗೆ ಕರೆದು ಅವರಿಗೆ ಒಂದು ರೂಪಾಯಿಗೆ 80 ರೂಪಾಯಿ ಕೊಡುವ ಕರಾರಿನ ಮೇಲೆ ಸಾರ್ವಜನಿಕರಿಂದ ಹಣ ಪಡೆದುಕೊಂಡು ಓ.ಸಿ ಅಂಕಿ ಸಂಖ್ಯೆಗಳನ್ನು ಬರೆದುಕೊಂಡು ಬಾಂಬೆ ವ ಕಲ್ಯಾಣ ಎನ್ನುವ ಓ.ಸಿ ಮಟಕಾ ಜೂಜಾಟ ಆಡುತ್ತಿದ್ದಾಗ ಸಿಕ್ಕ ಅಪರಾಧ. ಈ ಬಗ್ಗೆ ಸ:ತ:ಪಿ: ಶ್ರೀ ರವಿ ಯಡವನ್ನವರ, ಪಿ.ಎಸ್.ಐ. ದೇವರಹಿಪ್ಪರಗಿ ಪೊಲೀಸ್ ಠಾಣೆ.. ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 30.07,2021 ರಂದು ದೇವರಹಿಪ್ಪರಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

## 3] ಸಿಂದಗಿ ಪೊಲೀಸ ಠಾಣೆ ಗುನ್ನಾ. ನಂ: 217/2021 ಕಲಂ: 78(3) ಕೆ ಪಿ ಆ್ಯಕ್ಟ್

ದಿನಾಂಕ: 26.07.2021 ರಂದು 16:50 ಗಂಟೆಗೆ ಗಣಿಹಾರ ಗ್ರಾಮದ ಡಾ; ಬಿ.ಆರ್. ಅಂಬೇಡ್ಕರ ರವರ ಸರ್ಕಲ್ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ. ಇದರಲ್ಲಿ ಆರೋಪಿತನಾದ ರವೀಂದ್ರ ತಂದೆ ನಾನಾಗೌಡ ನಂದಶೇಟ್ಟಿ ವಯಾ: 36 ವರ್ಷ, ಜಾತಿ: ಹಿಂದೂ ಲಿಂಗಾಯತ, ಉದ್ಯೋಗ: ಕೂಲಿ ಸಾ; ಗಣಿಹಾರ ತಾ: ಸಿಂದಗಿ ಈತನು ತನ್ನ ಪಾಯಿದೆಗೋಸ್ಕರ 1 ರೂ.ಗೆ 80 ರೂ.ಕೊಡುವ ಕರಾರಿನ ಮೇಲೆ ಓ.ಸಿ. ಮಟಕಾ ಜೂಜಾಟವನ್ನು ಆಡುತ್ತಿರುವಾಗ ಸಲಕರಣೆ ಸಮೇತ ಸಿಕ್ಕಿದ್ದರಿಂದ ಸದರಿಯವನ ಮೇಲೆ ನಮ್ಮದು ಕಲಂ: 78(3) ಕೆ.ಪಿ. ಆಕ್ಟ ಪ್ರಕಾರ ಸರಕಾರಿ ತರ್ಫೆ ಪಿರ್ಯಾದಿ ಇದ್ದು ಪ್ರಕರಣ ದಾಖಲಿಸಿಕೊಳ್ಳಬೇಕು ಅಂತಾ ವಗೈರೆ ಪಿರ್ಯಾದಿಯಲ್ಲಿ ನಮೂದು ಇರುತ್ತದೆ. 1) ರೋಖ ಹಣ 300/- ರೂ 2) ಓ.ಸಿ. ಅಂಕಿ ಸಂಖ್ಯೆ ಬರೆದ ಚೀಟಿ ಒಂದು ಅ:ಸ:ಕಿ; 00=00 3) ಬಾಲಪೆನ್ ಒಂದು ಹಳೆದು ಚಾಲು ಸ್ಥಿತಿಯಲ್ಲಿದ್ದು ಅ:ಸ:ಕಿ: 00=00. ಈ ಬಗ್ಗೆ ಶ್ರೀ ಎಸ್.ಎಚ್. ಹೊಸಮನಿ. ಪಿ.ಎಸ್.ಐ. ಸಿಂದಗಿ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 30.07,2021 ರಂದು ಸಿಂದಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

## 4] ಬ.ಬಾಗೇವಾಡಿ ಪೊಲೀಸ ಠಾಣೆ ಗುನ್ನಾ. ನಂ: 129/2021 ಕಲಂ: 87 ಕೆ ಪಿ ಆ್ಯಕ್ಟ್

ದಿನಾಂಕ: 29.07.2021 ರಂದು 17:10 ಗಂಟೆಗೆ ಕರಿಹಳ್ಳ ತಾಂಡಾದ ಹತ್ತಿರ ಇದಲ್ಲಿ ಆರೋಪಿತನಾದ 1] ಸಂಜೀವ ತಂದೆ ಶಿವಪ್ಪ ಲಮಾಣಿ ವಯಾ- 30 ವರ್ಷ ಸಾ: ಬಾಗೇವಾಡಿ 2]ಪಿಂಟು ತಂದೆ ಶಂಖರ ಲಮಾಣಿ ವಯಾ-32 ವರ್ಷ ಸಾ:ನಾಗೂರ ತಾಂಡಾ 3] ಸಲೀಮ್ ತಂದೆ ದಸ್ತಗೀರಸಾಬ ತಾಂಬೊಳಿ ಸಾ: ಬಾಗೇವಾಡಿ ಬಸವ ನಗರ 4] ಅನೀಲ ತಂದೆ ಶಾಂತಾರಾಮ ರಾಠೋಡ ವಯಾ-25 ವರ್ಷ ಸಾ:ಕರಿಹಳ್ಳ ತಾಂಡಾ 5] ಪಿಂಟು ದ್ಯಾವಪ್ಪ ಚವ್ಹಾಣ ವಯಾ-29 ವರ್ಷ ಸಾ: ಕರಿಹಳ್ಳ ತಾಂಡಾ 6] ಕೇಶವ ತಂದೆ ಹುಸನಪ್ಪ ಅಂಗಡಗೇರಿ ವಯಾ- 21 ವರ್ಷ ಸಾ:ನಾಗೂರ 7] ಮೀರ ತಂದೆ ಹಸನಸಾಬ ಕೊರಬು ವಯಾ-29 ವರ್ಷ ಸಾ: ನಾಗೂರ 8] ರಾಜು ತಂದೆ ಶಂಕರೆಪ್ಪ ರಾಠೋಡ ವಯಾ-31 ವರ್ಷ ಸಾ: ಕರಿಹಳ್ಳ ತಾಂಡಾದ ಹತ್ತಿರ ಇರುವ ದಾವಲಸಾಬ ರಗಟಿ ಯವರ ಹೊಲದ ಹತ್ತಿರ ಸಾರ್ವಜನಿಕ ಹಳ್ಳದಲ್ಲಿ ತಮ್ಮ ಪಾಯಿದೆಗೊಸ್ಕರ ಇಸ್ಪೇಟ ಎಲಿಗಳ ಸಹಾಯದಿಂದ ಮನ್ನಾ ಜೂಜಾಟ ಆಡುತ್ತಿದ್ದಾಗ 08 ಜನರು ಸಲಕರಣೆಗಳ ಸಮೇತ ಸಿಕ್ಕಿದ್ದು, ಈ ಬಗ್ಗೆ **ಸ:ತ: ಶ್ರೀ; ಬಸವರಾಜ ಎಮ್ ಪಾಟೀಲ ಪೊಲೀಸ್ ಇನ್ಸಪೆಕ್ಟರ. ಬಸವನ ಬಾಗೇವಾಡಿ ಠಾಣೆ** ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 30.07,2021 ರಂದು ಸಿಂದಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**5] ಮುದ್ದೇಬಿಹಾಳ ಪೊಲೀಸ ಠಾಣೆ ಗುನ್ನಾ. ನಂ: 125/2021 ಕಲಂ: 15[ಎ], 32[3] ಕರ್ನಾಟಕ ಅಬಕಾರಿ ಕಾಯ್ದೆ–1965**

ದಿನಾಂಕ: 30.07.2021 ರಂದು 17;40 ಗಂಟೆಗೆ ಇದರಲ್ಲಿ ಆರೋಪಿತನಾದ ಅಕ್ಬರಸಾಬ ತಂದೆ ರಾಜೇಸಾಬ ನಾಡದಾಳ ವಯಾ 40 ವರ್ಷ ಉದ್ಯೋಗ ಡಾಬಾ ವ್ಯಾಪಾರ  ಜಾತಿ ಮುಸ್ಲಿಂ ಸಾ: ನಾಲತವಾಡ ಈತನು  ತನ್ನ ಡಾಬಾದಲ್ಲಿ ತನ್ನ ಸ್ವಂತ ಪಾಯಿದೆಗೊಸ್ಕರ ಸಂಬಂಧಿಸಿದ ಪ್ರಾಧಿಕಾರದಿಂದ ಯಾವುದೇ ಲೈಸೆನ್ಸ ವ ಪರವಾನಿಗೆಯನ್ನು ಪಡೆಯದೆ ಸಾರ್ವಜನಿಕರಿಗೆ ಮಧ್ಯ ಸೇವನೆ ಮಾಡಲು ಗ್ಲಾಸು, ನೀರು ಹಾಗೂ ತಿನಿಸು ಕೊಟ್ಟು ಸರಾಯಿ ಕುಡಿಯಲು ಸ್ಥಳಾವಕಾಶ ಮಾಡಿಕೊಟ್ಟಾಗ ಸಿಕ್ಕಿದ್ದು ಇರುತ್ತದೆ. ಈ ಬಗ್ಗೆ ಎಮ್. ಬಿ ಬಿರಾದಾರ ಪಿ.ಎಸ್.ಐ [ಕಾಸು] ಮುದ್ದೇಬಿಹಾಳ ಪೊಲೀಸ್ ಠಾಣೆ. ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 30.07,2021 ರಂದು ಮುದ್ದೇಬಿಹಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.